# ಯಾರು ಹೆಚ್ಚು



■ ಶಶಿರೇಖಾ ನಾಗೇಂದ್ರ

ಕಲಹ ಪ್ರಿಯರಾದ ನಾರದರು ಲೋಕ ಸಂಚಾರ ಮಾಡುತ್ತಾ ಕೈಲಾಸಕ್ಕೆ ಬಂದರು. ಇವರನ್ನು ಕಂಡ ನಂದಿ ಮನದಲ್ಲಿ ಈ ನಾರದರು ಇಂದೇನು ಕಲಹ ಹುಟ್ಟು ಹಾಕುವರು ಎಂದುಕೊಂಡನು. ಈ ವಿಷಯ ನಾರದರಿಗೆ ತಿಳಿಯಿತು. ನಾರದರು ಸ್ವಲ್ಪ ಗರ್ವದಿಂದಲೆ ನಂದಿ ನೀನು ನನ್ನೊಂದಿಗೆ ಹಾಡಬೇಕು ಹಾಡಿ ಗೆಲ್ಲಬೇಕು ಆಗುತ್ತದೆಯೇ! ಎಂದು ಕೇಳಿದರು. ಹಾಡು ಹೇಳುವುದು ಅಷ್ಟೇ ಅಲ್ವಾ? ಇದ್ಯಾವ ದೊಡ್ಡ ವಿಷಯ ನಾನು ಪರಶಿವನ ಪರಮಭಕ್ತ ಈ ಭಕ್ತ ಗೆಲ್ಲದಿರುತ್ತಾನೆಯೇ ಎಂದುಕೊಂಡು ಹಾಡಲು ಒಪ್ಪಿಕೊಂಡ. ನಾರದರು ಈ ಸ್ಪರ್ಧೆಗೆ ಶಿವ ಪಾರ್ವತಿಯರನ್ನೆ ತಿರ್ಪುಗಾರರನ್ನಾಗಿ ಮಾಡಿದರು. ನಾರದರಿಗೂ ನಂದಿಗೂ ಹಾಡಿನ ಸ್ಪರ್ಧೆ ಏರ್ಪಟಿತು. ಅದೇನೆಂದರೆ ಯಾರೂ ಸೊಗಸಾಗಿ ಹಾಡಿ, ಸಂಗೀತ ಸ್ಪರ್ಧೆಯಲ್ಲಿ ಗೆಲ್ಲುತ್ತಾರೆಂದು. ಸರಿ! ನಂದೀಶ ಅದ್ಭುತವಾಗಿ ಹಾಡಿದ. ನಾರದರು ನಾರಾಯಣಾ... ನಾರಾಯಣಾ... ಎಂದು ಅಮೋಘವಾಗಿ ಹಾಡಿದರು. ನಂದಿ ಹಲವಾರು ರಾಗಗಳಲ್ಲಿ ಶಿವನನ್ನು ಸ್ಮರಿಸಿ ರಾಗ ಆಲಾಪಿಸಿದ. ನಾರದರು ಸಹ ತಾನೇನೂ ಕಮ್ಮಿ ಎಂಬಂತೆ ನಾನಾ ರಾಗಗಳಲ್ಲಿ ಹಾಡಿದರು. ಇಬ್ಬರೂ ಚೆನ್ನಾಗಿ ಹಾಡಿದ್ದರಿಂದ ಶಿವ– ಪಾರ್ವತಿಯರಿಗೆ ಯಾರು ಹೆಚ್ಚು ಎಂದು ತಿರ್ಮಾನಿಸಲಾಗಲಿಲ್ಲ. ಆಗ ಶಿವ ಹೇಳಿದ ನಿಮ್ಮಿಬ್ಬರಲ್ಲಿ ಯಾರೂ ಹೆಚ್ಚೆಂದು ತಿರ್ಮಾನಿಸಲು ನಮಗೆ ಕಷ್ಟವೇ ನಿಮ್ಮ ಪ್ರತಿಭೆಯನ್ನು ಗುರುತಿಸುವ ಸರಿಯಾದ ವ್ಯಕ್ತಿ ವಿಷ್ಣು ಹಾಗಾಗಿ ನೀವು ವಿಷ್ಣುವಿನ ಬಳಿ ಹೋಗಿ ಎಂದನು.

ನಾರದರು ಮನಸ್ಸಿನಲ್ಲಿ ಸಂಗೀತದ ಪಿತಾಮಹಾ ನಾನೇ, ನಾನು ಈ ಸ್ಪರ್ಧೆಯಲ್ಲಿ ಗೆಲ್ಲದೆ ಇನ್ಯಾರು ಗೆಲ್ಲಲು ಸಾಧ್ಯ? ತ್ರಿಲೋಕ ಸಂಚಾರಿಯಾದ ನಾನು ಬುದ್ಧಿವಂತ. ನಂದಿ ಶಿವನ ಶಿಷ್ಯ, ಶಿಷ್ಯ ಸೋತನೆಂದು ಹೇಳಿದರೆ ನಂದಿಗೆ ಬೇಜಾರಾಗುತ್ತದೆ ಅದಕ್ಕೆ ವಿಷ್ಣುವಿನ ಬಳಿಗೆ ಕಳಿಸುತ್ತಿದ್ದಾರೆ ಎಂದುಕೊಂಡರು. ಇತ್ತ ನಂದೀಶ ನಾನು ಪರಶಿವನ ಪರಮ ಶಿಷ್ಯ ಕೈಲಾಸವೆ ನನ್ನ ಅಂಗೈಯಲ್ಲಿದೆ. ಸ್ಪರ್ಧೆಯಲ್ಲಿ ನಾನು ಗೆದ್ದೆ ಎಂದು ಹೇಳಿದರೆ ನಾರದರು ಶಿಷ್ಯನನ್ನು ಗೆಲ್ಲಿಸಿದರು ಎಂದು ಬೇಜಾರು ಮಾಡಿಕೊಳ್ಳುತ್ತಾರೆ ಅದಕ್ಕೆ ವಿಷ್ಣುವಿನ ಬಳಿಗೆ ಕಳಿಸುತ್ತಿದ್ದಾರೆ ಕಳಿಸಲಿ ನಾನೇ ಗೆಲ್ಲುವುದು ಎಂದುಕೊಂಡ.

ಇಬ್ಬರೂ ವೈಕುಂಠಕ್ಕೆ ಬಂದು ವಿಷ್ಣುವಿಗೆ ವಿಷಯ ತಿಳಿಸಿದರು. ಶಿವ ಯಾಕೆ ಹೀಗೆ ಹೇಳಿ ಕಳಿಸಿದ್ದಾನೆಂದು ವಿಷ್ಣುವಿಗೆ ಅರ್ಥವಾಯಿತು. ವಿಷ್ಣುವಿನ ಎದುರು ಇಬ್ಬರೂ ಸುಮಧುರವಾಗಿ ಹಾಡಿದರು. ವಿಷ್ಣುವಿಗೂ ವಿಜಯಿ ಯಾರೆಂದು ತಿರ್ಮಾನಿಸುವುದು ಕಷ್ಟವಾಯಿತು. ಅಲ್ಲದೆ ಅವರ ಗರ್ವವನ್ನು ಇಳಿಸಬೇಕಿತ್ತು. ನಿಮ್ಮಲ್ಲಿ ಯಾರು ವಿಜಯಿ ಎಂದು ತಿರ್ಮಾನಿಸುವುದುದಕ್ಕೆ ನನ್ನಿಂದ ಆಗುತ್ತಿಲ್ಲ. ಅದಕ್ಕಾಗಿ ಭೂಲೋಕಕ್ಕೆ ಹೋಗೋಣ ಬನ್ನಿ ಭೂಲೋಕದಲ್ಲಿ ವಾನರನೊಬ್ಬನಿದ್ದಾನೆ ಅವನು ತುಂಬಾ ಚೆನ್ನಾಗಿ ಹಾಡುತ್ತಾನೆ ನಿಮ್ಮ ಹಾಡನ್ನು ಕೇಳಿ ಯಾರು ವಿಜಯಿಯೆಂದು ಅವನೇ ನಿರ್ಧರಿಸುತ್ತಾನೆ ಎಂದರು. ನಂದಿ ನಾರದರಿಬ್ಬರು ಮನದಲ್ಲಿಯೇ ಭೂಲೋಕದ ವಾನರ ನಮ್ಮ ಹಾಡನ್ನು ಕೇಳಿ ವಿಜಯಿಯಾರೆಂದು ತಿರ್ಮಾನಿಸಲು ಸಾಧ್ಯವೇ? ಶಿವ ವಿಷ್ಣುವಿಗೆ ನಮ್ಮಲ್ಲಿ ಯಾರು ವಿಜಯಿಯೆಂದು ತಿರ್ಮಾನಿಸಲಾಗಲಿಲ್ಲ ಎಂದು ಯೋಚಿಸುತ್ತಾ ವಿಷ್ಣುವಿನ ಮಾತಿಗೆ ಒಪ್ಪಿದರು.

ವಿಷ್ಣುವಿನ ಆದೇಶದಂತೆ ಮೂವರು ಭೂಲೋಕಕ್ಕೆ ಬಂದರು. ಅಲ್ಲಿ ವಾನರನೊಬ್ಬ ಬಹು ಸುಶ್ರಾವ್ಯವಾಗಿ ಭಕ್ತಿಯಿಂದ ಮೈ ಮರೆತು ಹಾಡುತಿದ್ದ ಆ ವಾನರ ಬೇರೆ ಯಾರೂ ಅಲ್ಲ ರಾಮಭಕ್ತ ಹನುಮಂತ. ವಿಷ್ಣು ತಾವು ಭೂಲೋಕಕ್ಕೆ ಬಂದ ವಿಷಯ ತಿಳಿಸಿದರು. ನಾರದರು ಮತ್ತು ನಂದಿ ಹನುಮನ ಎದುರಿಗೆ ನಾನಾ ಬಗೆಯ ಹಾಡುಗಳನ್ನು ಹಾಡಿದರು. ಆಗ ವಿಷ್ಣು ಹನುಮ ನಿನ್ನ ಕಂಠದಿಂದ ಒಂದು ಹಾಡು ಹೊರಬರಲಿ ಎಂದರು. ಹನುಮಂತ ರಾಮಾ... ರಾಮಾ... ಎಂದು ಮೈಮರೆತು ಹಾಡತೊಡಗಿದ ಭೂಲೋಕದಲ್ಲಿದ್ದ ನದಿ ಕೊಳಗಳೆಲ್ಲ ಹೆಪ್ಪುಗಟ್ಟಿದವು. ಆಗ ವಿಷ್ಣು ನಾರದ ನಂದಿಗೆ ಹೇಳಿದರು ನಿಮ್ಮಲ್ಲಿ ಯಾರು ಹಾಡಿ ಈ ಹೆಪ್ಪುಗಟ್ಟಿರುವ ನದಿ ಕೊಳದ ನೀರನ್ನು ಪುನಃ ತಿಳಿ ನೀರನ್ನಾಗಿ ಮಾಡುವಿರೂ ಅವರು ಸ್ಪರ್ಧೆಯಲ್ಲಿ ಗೆದ್ದಂತೆ ಎಂದರು. ನಾರದರು ನಂದಿ ಇಬ್ಬರೂ ಹಾಡಿದರು ಹೆಪ್ಪುಗಟ್ಟಿದ್ದ ನೀರು ತಿಳಿಯಾಗಲಿಲ್ಲ. ಪುನಃ ಹನುಮಂತನೆ ಹಾಡಿದ ಆಗ ನದಿಕೊಳದ ನೀರು ತಿಳಿಯಾಯಿತು. ನಂದಿ ನಾರದರಿಗೆ ತಮ್ಮ ತಪ್ಪಿನ ಅರಿವಾಯಿತು ನಾಚಿ ತಲೆಬಗ್ಗಿಸಿ ಹನುಮನ ಕ್ಷಮೆ ಕೇಳಿದರು. ■